ಓ.ಎಸ್.185/2021 ಪಿ.ಡಬ್ಲು-1
*ರಮೇಶ ತಂದೆ ಕೃಷ್ಣಪ್ಪ*

ದಿ.02-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ ಕೆ.ಕೆ.ವಿ ವಕೀಲರಿಂದ 3 ರಿಂದ 6 ನೇ ಪ್ರತಿವಾದಿಗಳ ಪರವಾಗಿ :-</u>

1ನೇ ವಾದಿ ವೆಂಕಟೇಶ ನನ್ನ ತಮ್ಮ. 3 ರಿಂದ 6 ನೇ ಪ್ರತಿವಾದಿಗಳು ಹನುಮಪ್ಪನ ಮಕ್ಕಳಾಗಿರುತ್ತಾರೆ. 1ನೇ ಪ್ರತಿವಾದಿ ಭೀಮವ್ವ ಹನುಮಪ್ಪನ ತಾಯಿಯಾಗಿರುತ್ತಾರೆ. 2 ನೇ ಪ್ರತಿವಾದಿ ಸಿದ್ದವ್ವ ಭೀಮವ್ವಳ ಮಗಳಾಗಿರುತ್ತಾರೆ. 2ನೇ ಪ್ರತಿವಾದಿ ಹನುಮಂತನ ಅಕ್ಕ ಆಗಿರುತ್ತಾರೆ. ಹನುಮಂತ ರವರಿಗೆ ಒಟ್ಟು 26 ಎಕರೆ ಜಮೀನು ಇತ್ತು. ಅದರಲ್ಲಿ ನಾವು 4 ಎಕರೆ ಖರೀದಿಸಿರುತ್ತೇವೆ. ನಾವು ಖರೀದಿಸುವಾಗ ಭೀಮವ್ವ ಮತ್ತು ಭೀಮವ್ವನ ಮಕ್ಕಳು ಭಾಗ ಆಗಿರಲಿಲ್ಲ. 3 ರಿಂದ 6 ನೇ ಪ್ರತಿವಾದಿಗಳು ನಾವು ಆಸ್ತಿ ಖರೀದಿಸುವಾಗ ಚಿಕ್ಕವರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಕುಟುಂಬದ ಹಿರಿತನವನ್ನು ಭೀಮವ್ವ ಮಾಡುತ್ತಿದ್ದರು ಎಂದರೆ ಸರಿ. 26 ಎಕರೆ ಜಮೀನು ಹನುಮಂತನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಮನೆಯ ಹಿರಿತನವನ್ನು ಭೀಮವ್ವಳೆ ಮಾಡುತ್ತಿದ್ದಳು ಎಂದರೆ ಸರಿ. ಸಾಕ್ಷಿ ಹನುಮಂತ ಕೂಡ ಮಾಡುತ್ತಿದ್ದ ಎನ್ನುತ್ತಾರೆ. ನಮ್ಮ ಕ್ರಯ ಪತ್ರ ಆಗುವಾಗ ಸಿದ್ದವ್ವ ಕರಡಕಲ್ಲದಲ್ಲಿ ಇದ್ದರು ಎಂದರೆ ಸರಿ. ಹನುಮಂತನ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ನಾವು ಖರಿದಿ ಮಾಡುವಾಗ ಹನುಮಂತನ ಹೆಂಡತಿ ಇದ್ದಿರಲಿಲ್ಲ. ಭೀಮವ್ವ ತನ್ನ ಸೊಸೆಯನ್ನು ಮತ್ತು ಮೊಮ್ಮಕ್ಕಳನ್ನು ಮನೆಯಿಂದ ಹೊರ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ರಿಂದ 6 ನೇ ಪ್ರತಿವಾದಿಗಳು ಮತ್ತು ಅವರ ತಾಯಿ ಮಸ್ಕಿಯಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ಖರಿದಿ ಪತ್ರದ ಕುರಿತು ಮಾತುಕತೆ ಕರಡಕಲ್ಲಿನಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ಭೀಮವ್ವ, ಗಿರಿಮಲ್ಲನಗೌಡ, ಬಸಣ್ಣ ಕಲ್ಲೂರು, ಬಸಣ್ಣ ಇದ್ದರು. ಅವರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಭೀಮವ್ವಳು ಮುಖ್ಯ ಪಾತ್ರ ವಹಿಸಿ ನಮಗೆ ಖರೀದಿ ಮಾಡಿಸಿ ಕೊಟ್ಟಿರುತ್ತಾರೆ ಎಂದರೆ ಸರಿ. ಹನುಮಂತನ ಹೆಂಡತಿ ಮಲ್ಲಮ್ಮಳದು ಹನುಮಂತ ಆಸ್ತಿ ಮಾರಾಟ ಮಾಡಲು ತಕರಾರು ಇತ್ತು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಭೀಮವ್ವ ತನ್ನ ಪಾಲಿನ ಆಸ್ತಿ ಮಾತ್ರ ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಹನುಮಂತ ಮತ್ತು ಭೀಮವ್ವ ಸೇರಿ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಹನುಂಮತ ತನ್ನ ಪಾಲಿನ ಆಸ್ತಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಭೀಮವ್ವ ಮತ್ತು ಹನುಮಂತ ಇಬ್ಬರೂ ಸೇರಿ ಹಣ ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ಹನುಮಂತ ನಾನು ಹೇಳಿದಂತೆ ಯಾವುದೇ ಹಣ ಪಡೆಯದೇ ಇದ್ದರೂ ಈ ಕೇಸಿನ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. 1998 ರಲ್ಲಿ ಓ.ಎಸ್. ನಂ.40/1998 ಎಂದು ಹನುಮಂತನ ಹೆಂಡತಿ ಮತ್ತು ಮಕ್ಕಳು ಹನುಮಂತನ ಮೇಲೆ ಪಾಲು ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಹನುಮಂತನ ಹೆಂಡತಿ ಮತ್ತು ಮಕ್ಕಳಿಗೆ ಪಾಲು ನೀಡಬೇಕು ಎಂದು ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2015 ರಲ್ಲಿ ಎಫ್.ಡಿ.ಪಿ ಕೇಸು ಕೂಡ ಅವರು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಹಣಿಯಲ್ಲಿ ಅವರ ಹೆಸರು ದಾಖಲಾಗದ ಕಾರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅವರು ಅರ್ಜಿಯನ್ನು ಕೂಡ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಭೀಮವ್ವ ಮತ್ತು ಸಿದ್ದವ್ವ ಸದರಿ ಕೇಸುಗಳ ಕುರಿತು ನನಗೆ ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರಗಳು ಗೊತ್ತಿದ್ದರೂ ನಾನು 10 ವರ್ಷ ಬಿಟ್ಟು ಈ ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಖರಿದಿ ಪತ್ರದ ಸಾಕ್ಷಿದಾರರಾದ ಬಸಪ್ಪ, ಹನುಮಂತಪ್ಪ ರವರು ಈಗ ಮೃತರಾಗಿರುತ್ತಾರೆ. ಗಿರಿಮಲ್ಲನಗೌಡ, ಬಸಪ್ಪ ಈಗ ಜೀವಿತ ಇರುತ್ತಾರೆ. ಖರಿದಿ ಪತ್ರದಂತೆ ನಾವು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತೇವೆ. ನಾವು ಭೀಮವ್ವನ ಭಾಗದಲ್ಲಿ ಮಾತ್ರ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ನಾನು ಭೀಮವ್ವಳ ಪಾಲಿನ 4 ಎಕರೆ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸಾಕ್ಷಿ ಖರೀದಿ ಮಾಡಿದಂತೆ ಸ್ವಾಧೀನಲ್ಲಿ ಇರುತ್ತೇನೆ ಎನ್ನುತ್ತಾರೆ. ಸಾಕ್ಷಿ ಅದು ಯಾರ ಪಾಲಿಗೆ ಬಂದಿರುತ್ತದೆ ಎಂದು ನಿಖರವಾಗಿ ನನಗೆ ಗೊತ್ತಿಲ್ಲ. ಅದು ಒಂದೆ ಹೊಲ ಇರುತ್ತದೆ ಎನ್ನುತ್ತಾರೆ.

4. ನಾನು ಈಗ ಸ್ವಾಧೀನದಲ್ಲಿ ಇರುವ ಆಸ್ತಿಯ ಚೆಕ್ಕಬಂದಿ ಗೊತ್ತು. ಪೂರ್ವಕ್ಕೆ ಯಲಗಲದಿನ್ನಿ ಪೂಜಾರಿಯವರು ಇರುತ್ತಾರೆ. ಪಶ್ಚಿಮಕ್ಕೆ ಮದನಸಾಬ ಗೌಳಿ ಇರುತ್ತಾರೆ. ನಾನು ಖರೀದಿ ಮಾಡುವ ಮೊದಲು ಅಲ್ಲಿ ಹನುಮಂತನ ಉಳಿದ ಜಮೀನು ಇತ್ತು. ಉತ್ತರಕ್ಕೆ ಸುಬಾನಸಾಬ ಗೌಳಿ ಇರುತ್ತಾರೆ. ದಕ್ಷಿಣಕ್ಕೆ ಭೀಮಣ್ಣ ಬಾಂಡೆದವರು ಇರುತ್ತಾರೆ.

5. ನಾನು ಭೀಮವ್ವಳ ಪಾಲಿನ ಆಸ್ತಿ ಮಾತ್ರ ಖರೀದಿ ಮಾಡಿದ್ದು ಹನುಮಂತನ ಆಸ್ತಿ ಕೂಡ ಖರೀದಿ ಮಾಡಿರುತ್ತೇನೆ ಎಂದು ಈ ಕೇಸಿನ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ವಿ.ಜೆ.ಕೆ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಗಳ ಪರವಾಗಿ :-</u>

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.